ದಿಃ 24-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು 3 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಬಿ.ಎಲ್.ಟಿ. ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಎಸ್.ಎಸ್.ಸಿ. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು 3 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ . ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ಡಿ .ಡಬ್ಲೂ-1 ರವರು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

ನಾನು ಕಲ್ಲೇಹೋಳ ಗ್ರಾಮದ ಖಾಯ ರಹವಾಸಿ ಇರುತ್ತೇನೆ. ಅದೇ ರೀತಿ 3 ಮತ್ತು 4 ನೇ ಪ್ರತಿವಾದಿಯರು ಕಲ್ಲೇಹೋಳ ಗ್ರಾಮದ ಖಾಯ ರಹವಾಸಿ ಇರುತ್ತಾರೆ ಎಂದರೆ ಸರಿ. ಮೃತ 1 ನೇ ಪ್ರತಿವಾದಿಯು ನನ್ನ ಬಾಹುಬಂದ್ ಸಂಬಂಧವನ್ನು ಹೊಂದಿರುತ್ತಾರೆ . 1 ನೇ ಪ್ರತಿವಾದಿಯು ಈಗ ಮೃತರಾಗಿರುತ್ತಾರೆ. 1 ನೇ ಪ್ರತಿವಾದಿಯು ಮೃತರಾಗುವ ಪೂರ್ವದಲ್ಲಿ ಅವರು ಮತ್ತು ಅವರ ಕುಟುಂಬದವರು ಕಂಗ್ರಾಳಿ ಕೆ.ಹೆಚ್. ನಲ್ಲಿ ವಾಸವಾಗಿದ್ದರು. 1 ನೇ ಪ್ರತಿವಾದಿಯು ಕಂಗ್ರಾಳಿ ಗ್ರಾಮದಲ್ಲಿ ಬೇಕರಿ ಉದ್ಯೋಗವನ್ನು ಮಾಡುತ್ತಿದ್ದರು ಎಂದರೆ ಸರಿ . 1 ನೇ ಪ್ರತಿವಾದಿಯು ಮೃತರಾದ ನಂತರ ಈಗಲೂ ಅವರ ಹೆಂಡತಿ ಮಕ್ಕಳು ಕಂಗ್ರಾಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಸದರಿಯವರು ಮೊದಲಿನಿಂದಲೂ ಕಂಗ್ರಾಳಿ ಗ್ರಾಮದಲ್ಲಿ ಇರುತ್ತಾರೆ.

**2.** ದಾವಾ ಆಸ್ತಿಯಾದ ಸರ್ವೆ ನಂ.160/2 ರಲ್ಲಿ ನನ್ನದು ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸರಿ. ಸದರಿ ಸರ್ವೆ ನಂ .160/2 ರ ಆಸ್ತಿಯನ್ನು ಮೃತ 1 ನೇ ಪ್ರತಿವಾದಿಯು 3 ಮತ್ತು 4 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ

ಗೊತ್ತಿಲ್ಲ. ದಾವಾ ಆಸ್ತಿಗಳಾದ ಸರ್ವೆ ನಂ.129 ಮತ್ತು 160/2 ರ ಆಸ್ತಿಗಳ ಅಂತರ ಎಷ್ಟು ಇರುತ್ತದೆ ಎಂದರೆ ಸಾಕ್ಷಿಯು ಅಂದಾಜು 1 ಕಿಲೋಮೀಟರ್ ಆಗಬಹುದು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳಾದ ಸರ್ವೆ ನಂ .129 ಮತ್ತು 160/2 ಕಲ್ಲೇಹೋಳ ಗ್ರಾಮದಲ್ಲಿ ಇರುತ್ತವೆ ಎಂದರೆ ಸರಿ. ಸರ್ವೆ ನಂ.160/2 ರ ಆಸ್ತಿಯಲ್ಲಿ 3 ಮತ್ತು 4 ನೇ ಪ್ರತಿವಾದಿಯರು ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿ. ಈಗ 3 ಮತ್ತು 4 ನೇ ಪ್ರತಿವಾದಿಯರು ಸರ್ವೆ ನಂ.160/2 ರ ಆಸ್ತಿಯಲ್ಲಿ ಆಲೂಗೆಡ್ಡೆ ಮತ್ತು ಭತ್ತವನ್ನು ಬೆಳೆಯುತ್ತಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಒಂದು ಬೋರ್ವೆಲ್ ನ್ನು ಹಾಕಿರುತ್ತಾರೆ ಎಂದರೆ ಸರಿ . 3 ಮತ್ತು 4 ನೇ ಪ್ರತಿವಾದಿಯರು ಸರ್ವೆ ನಂ .160/2 ರ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡ ದಿನದಿಂದ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಈಗಲೂ 3 ಮತ್ತು 4 ನೇ ಪ್ರತಿವಾದಿಯರು ಸದರಿ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ.

**5 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿರುತ್ತಾರೆ . 6 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/–**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**